ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ಆಯುಕ್ತರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು – 560 002.***

ಸಂಖ್ಯೆ: ಹೆ.ನಿ.ನ.ಯೋ/ವ್ಯ/ಪಿಆರ್/166/ 2011-12 ದಿನಾಂಕ: 22-09-2011

31-10-2011

## ಸುತ್ತೋಲೆ

ವಿಷಯ: ರಸ್ತೆ ಅಗೆತ ಅನುಮತಿಯನ್ನು ನಕ್ಷೆ ಮಂಜೂರಾತಿ ಸಮಯದಲ್ಲಿಯೇ ನೀಡುವ ಬಗ್ಗೆ.

ಉಲ್ಲೇಖ: 1) ಆಯುಕ್ತರವರ ಆದೇಶದ ಸಂಖ್ಯೆ: ಪಿಎಸ್/2181/94-95 ದಿನಾಂಕ: 04-08-98
2) ಕೌನ್ಸಿಲ್ ಸಭೆಯ ವಿಷಯದ ಸಂಖ್ಯೆ: 05 (72)/ 2011 – 12, ನಿರ್ಣಯ ದಿನಾಂಕ: 28-06-2011

*******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಟ್ಟಡಗಳಿಗೆ ರಸ್ತೆ ಅಗೆತದ ಶುಲ್ಕಗಳನ್ನು ಪಾವತಿಸಿಕೊಳ್ಳುವ ಬಗ್ಗೆ ಉಲ್ಲೇಖ (1) ರ ಆದೇಶದಲ್ಲಿ ಈಗಾಗಲೇ ಸೂಚನೆಗಳನ್ನು ನೀಡಲಾಗಿರುತ್ತದೆ. ರಸ್ತೆ ಅಗೆತಕ್ಕೆ ಅನುಮತಿ ಪಡೆಯಲು ಉಂಟಾಗುತ್ತಿರುವ ತೊಂದರೆಗಳಿಂದಾಗಿ ಸಾರ್ವಜನಿಕರಿಂದ ಬಂದ ಅನೇಕ ಅಹವಾಲುಗಳನ್ನು ಗಮನದಲ್ಲಿರಿಸಿ ಸ್ವಾಧೀನಾನುಭವ ಪ್ರಮಾಣಪತ್ರ ಕಡ್ಡಾಯಗೊಳಿಸಲಾಗಿರುವ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಸಮಯದಲ್ಲೇ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು ಅನುಮತಿ ನೀಡತಕ್ಕದೆಂದು ಮತ್ತು ಉಳಿದ ನಕ್ಷೆ ಮಂಜೂರಾತಿ ಪ್ರಾಧಿಕಾರಗಳು ರಸ್ತೆ ಅಗೆತದ ಪರವಾನಗಿಯನ್ನು ಶುಲ್ಕ ಪಾವತಿಸಿಕೊಂಡು ಮಂಜೂರಾತಿ ನೀಡುವ ಸಮಯದಲ್ಲೇ ನೀಡಲು ಆದೇಶಿಸಲಾಗಿರುತ್ತದೆ.

ನಕ್ಷೆ ಮಂಜೂರಾತಿ ಪ್ರಕ್ರಿಯೆಯನ್ನು ಸರಳಗೊಳಿಸಿ ಪಾಲಿಕೆಯ ಎಲ್ಲಾ ವಲಯ ಕಛೇರಿಗಳಲ್ಲಿ ನಗರ ಯೋಜನೆಗಳನ್ನು ಸ್ಥಾಪಿಸಲಾಗಿದ್ದು, ಬಹುಮಹಡಿ ಕಟ್ಟಡಗಳ ನಕ್ಷೆ ಮಂಜೂರಾತಿ ನೀಡುವ ಅಧಿಕಾರವನ್ನು ಪಾಲಿಕೆಯ ಕೇಂದ್ರ ನಗರ ಯೋಜನಾ ಪ್ರಾಧಿಕಾರಕ್ಕೆ ಹಾಗೂ ಉಳಿದ ಕಟ್ಟಡಗಳ ನಕ್ಷೆ ಮಂಜೂರಾತಿ ಅಧಿಕಾರವನ್ನು ಪಾಲಿಕೆಯ ವಲಯ ನಗರ ಯೋಜನಾ ಪ್ರಾಧಿಕಾರಕ್ಕೆ ಈಗಾಗಲೇ ಪ್ರತ್ಯಾಯೋಜಿಸಲಾಗಿರುತ್ತದೆ.

ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಕೌನ್ಸಿಲ್ ಸಭೆಯು ದೀರ್ಘ ಪರಿಶೀಲನೆಯ ನಂತರ ರಸ್ತೆ ಅಗೆತದ ಪರವಾನಗಿ ನೀಡುವ ಸಂಬಂಧ ಅಗತ್ಯ ಶುಲ್ಕ ಪಾವತಿಸಿಕೊಂಡು ರಸ್ತೆ ಅಗೆತಕ್ಕೆ ಅನುಮತಿ ನೀಡಲು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

ಅ) 5 ಮತ್ತು ಅದಕ್ಕಿಂತ ಹೆಚ್ಚಿನ ಘಟಕಗಳನ್ನು ಹೊಂದಿರುವ ವಸತಿ ಸಮುಚ್ಚಯ ಹಾಗೂ

ಆ) 300 ಚ..ಮೀ. ಗಿಂತ ಹೆಚ್ಚಿನ ಕಟ್ಟಡ ವಿಸ್ತೀರ್ಣ ಇರುವಂತಹ ವಾಣಿಜ್ಯ / ಸಾರ್ವಜನಿಕ/ ಕೈಗಾರಿಕಾ ಕಟ್ಟಡಗಳಿಗೆ ಹಾಗೂ

ಇ) ನೆಲ ಮತ್ತು ಮೇಲಿನ 3 ಅಂತಸ್ತು ಹಾಗೂ ಅದಕ್ಕಿಂತ ಮೇಲ್ಪಟ್ಟ ಅಂತಸ್ತುಗಳ ಎಲ್ಲಾ ಉಪಯೋಗದ ಕಟ್ಟಡಗಳಿಗೆ ಕಡ್ಡಾಯವಾಗಿ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಸಂದರ್ಭದಲ್ಲಿ ಇತರೇ ಶುಲ್ಕಗಳೊಂದಿಗೆ ಭರಿಸಿಕೊಳ್ಳುವುದು.

ಉಳಿದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಅಂದರೆ,

ಅ) 5 ಕ್ಕಿಂತ ಕಡಿಮೆ ಘಟಕಗಳನ್ನು ಹೊಂದಿರುವ ವಸತಿ ಸಮುಚ್ಚಯ ಹಾಗೂ

ಆ) 300 ಚ..ಮೀ. ಗಿಂತ ಕಡಿಮೆ ಕಟ್ಟಡ ವಿಸ್ತೀರ್ಣ ಇರುವಂತಹ ವಾಣಿಜ್ಯ / ಸಾರ್ವಜನಿಕ/ ಕೈಗಾರಿಕಾ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡುವ ಸಂದರ್ಭದಲ್ಲೇ ರಸ್ತೆ ಅಗೆತದ ಶುಲ್ಕವನ್ನು ಭರಿಸಿಕೊಳ್ಳಲು, ಕಟ್ಟಡವು ಪೂರ್ಣಗೊಂಡ ನಂತರ ನಿರಾಕ್ಷೇಪಣಾ ಪತ್ರ ನೀಡಲು ಒಪ್ಪುವುದು

ಮೇಲಿನ ಕೌನ್ಸಿಲ್ ಸಭೆಯ ನಿರ್ಣಯದಂತೆ ಹೊರಡಿಸಲಾಗಿರುವ ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ನಕ್ಷೆ ಮಂಜೂರಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ. ಹಾಗೂ ಈ ಆದೇಶವು ಈ ತಕ್ಷಣದಿಂದಲೇ ಜಾರಿಗೆ ಬರುವುದು.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು

1. ಪೂಜ್ಯ ಮಹಾಪೌರರು ಮತ್ತು ಉಪ ಮಹಾ ಪೌರರ ಅವಗಾಹನೆಗಾಗಿ ಸಲ್ಲಿಸಿದೆ.
2. ಅಧ್ಯಕ್ಷರು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಯೋಜನೆ) ರವರ ಮಾಹಿತಿಗಾಗಿ
4. ಪ್ರಧಾನ ಅಭಿಯಂತರರವರ ಮಾಹಿತಿಗಾಗಿ
5. ಅಪರ / ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ / ಯಲಹಂಕ / ಮಹದೇವಪುರ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿನಗರ ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಹೆಚ್ಚುವರಿ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ಮುಖ್ಯ ಅಭಿಯಂತರರು (ಪೂರ್ವ / ಪಶ್ಚಿಮ / ದಕ್ಷಿಣ / ಯಲಹಂಕ / ಮಹದೇವಪುರ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿನಗರ ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ & ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9. ಸಹಾಯಕ ನಿರ್ದೇಶಕರು (ನಗರ ಯೋಜನೆ) (ಪೂರ್ವ / ಪಶ್ಚಿಮ / ದಕ್ಷಿಣ / ಯಲಹಂಕ / ಮಹದೇವಪುರ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿನಗರ ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಕಛೇರಿ ಪ್ರತಿ
11. ಸಲಹೆಗಾರರು (ಮಾಹಿತಿ ತಂತ್ರಜ್ಞಾನ) ರವರ ಮಾಹಿತಿಗಾಗಿ ಹಾಗೂ ಸದರಿ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.